ಸದ್ಬೋಧಪ್ರದೀಪಿಕೆ.

ಚೀಫ್‌ಕೋರ್ಟ್ ಕ್ಲಾರ್ಕ್

ಜೀರಗೆ ಬಸವಲಿಂಗಪ್ಪನವರಿಂದ

ರಚಿಸಲ್ಪಟ್ಟುದು.

S.R. DESAPANDE BSc
MALMADDI DHARWAR

[illegible]

ಕ್ರಯ ೦-೨-೦.

Navaratna & Sons, Bangalore City.

ಸ ದ್ಬೋ ಧ ಪ್ರ ದೀ ಪಿ ಕೆ.

ಕಂ॥ ಶ್ರೀ ಸಾಂಬಶಿವಕಟಾಕ್ಷದಿ ।
ಭಾಸುರಸದ್ಬೋಧ ದೀಪಿಕಾಹ್ವಯಕೃತಿಯಂ ॥
ಶಾಸನಿಸಿಪೇಳ್ದನಿಳೆಗುರೆ ।
ಲೇಸಿಂದಂ ಜೇರಗೆಯ ಬಸವಲಿಂಗಾಖ್ಯಂ ॥೧॥

ಕಂ॥ ಮುನ್ನಿನಬಸವಾದಿಗಳಂ ।
ಸನ್ನುತಕೆರೆಯವರಪದ್ಮರಸಹರಿಹರವಿ ॥
ಶ್ರೋನ್ನತರಾಘವಭೀಮಜ ।
ಗನ್ನುತ ಸದ್ವೀರಸಂಗರಿವರಂನುತಿಪೆಂ ॥೨॥

ಸ ತ್ಯ.

ರಗಳೆ॥ ಸರ್ವರ್ಸತ್ಯದೆನಡೆಯಲ್ವೇಳ್ಕುಂ ।
ಗರ್ವವಬಿಟ್ಟುರೆವರ್ತಿಸವೇಳ್ಕುಂ ॥೩॥

ವಿ ದ್ಯ

ವಿದ್ಯವನೆಲ್ಲರ್ಮೋದದೆಕಲಿವುದು ।
ವಿದ್ಯದೆಸಕಲೇಷ್ಟಂಗಳಪಡೆವುದು ॥೪॥
ವಿದ್ಯವೆಚಿಂತಾರತ್ನಂನೆಲದೊಳ್ ।
ವಿದ್ಯವೆಕಲ್ಪೋರ್ವೀಜಂನೆಲದೊಳ್ ॥೫॥
ವಿದ್ಯವೆನಿರ್ಜರಧೇನುವುನೆಲದೊಳ್ ।

ವಿದ್ಯವೆನಿರುಪಮಪರುಷಂನೆಲದೊಳ್ ||೬||
ವಿದ್ಯದಿನರರಿಗೆ ಪೂಜ್ಯತೆಬರ್ಕುಂ ।
ವಿದ್ಯದಿನರರಿಗೆ ಕುಶಲತೆಬರ್ಕುಂ ||೭||
ವಿದ್ಯದಿನರರಿಗೆ ವಿನಯತೆಬರ್ಕುಂ ।
ವಿದ್ಯದಿನರರಿಗೆ ವಿಜಯತೆಬರ್ಕುಂ ||೮||
ವಿದ್ಯವನುಳ್ಳಂಸಿಂಹಸಮಾನಂ ।
ವಿದ್ಯಾಹೀನಂಮಹಿಷಸಮಾನಂ ||೯||
ಎಲ್ಲಾ ಕಾಲದೊಳೆಲ್ಲಾ ಸ್ಥಳದೊಳ್ ।
ಎಲ್ಲಾ ಯತ್ನದೊಳೆಲ್ಲಾ ಶ್ರಮೆಯೊಳ್ ||೧೦||
ವಿದ್ಯವನುಳ್ಳಂವಿಜಯಮಪಡೆವಂ ।
ವಿದ್ಯಾವಿರಹಿತನಪಜಯಮಾಂಪಂ ||೧೧||

ಸುಳ್ಳು.

ಸುಳ್ಳನದಾರುಂಪೇಳಲ್ಕಾಗದು ।
ಸುಳ್ಳಂಜನರೊಳ್ನಂಬಿಕೆ ಕೆಡುವುದು ||೧೨||
ಸುಳ್ಳಂಮನುಜನಧೋಗತಿವಡೆವಂ ।
ಸುಳ್ಳಿಂದಲ್ಪಾಯುವಮಿಗೆಪಡೆವಂ ||೧೩||
ಸುಳ್ಳನಮನುಜನ ಮೊದಲೊಳಗೆಲ್ಲರ್ ।
ನಿಲ್ಲದೆದೊಡ್ಡವನೆಂದುರೆಕಾಣ್ಬರ್ ||೧೪||
ನೈಜಗುಣಂಪೊರಬೀಳಲ್ಕಡೆಯೊಳ್ ।
ಪೂಜಿಸದವನಂತೂಳ್ವತ್ವರೆಯೊಳ್ ||೧೫||
ಸುಳ್ಳದುಮನುಜಂಗತಿಹೀನಗುಣಂ ।
ಸುಳ್ಳದುತಲೆಪೊಯ್ವುದಕೆಸಮಾನಂ ||೧೬||

ಆದೊಡೆಸುಳ್ಳಂನಿಜರಕ್ಷಣೆಯೊಳ್ ।
ವೋದದಿನಲ್ಪವಪೇಳ್ವುದುಧರೆಯೊಳ್ ॥೧೭॥

ಕ ಳ್ಳ ತ ನ.

ಪರರಪದಾರ್ಥವಕಂಡೊಡೆಕೆಲವರ್ ।
ಸಿರಿಯುನಿಧಿದೊರಕಿದಂತುರೆತಿಳಿವರ್ ॥೧೮॥
ಅದರಿಂಪ್ರಾಣಾಪಾಯವೆಂತವುಗುರೆ ।
ಒದವದುಮತ್ತಾವಮಲಸುಖಂನೆರೆ ॥೧೯॥
ಬೋರದೊಳಿರ್ಪಾಕೊಬರಿಗೆಬಯಸುತೆ ।
ಮೀರುತೆಬೀಳ್ದಲಿಚಿಂತೆಯನಾನುತೆ ॥೨೦॥
ತಪ್ಪಿಸಿಕೊಳ್ಳುವದಕುಪಾಯುವಿಲ್ಲದೆ ।
ತೆಪ್ಪನೆಬಿರುಸುಯ್ವುಡುತತಿಮಂದದೆ ॥೨೧॥
ನೋವಂಮಿಗೆಯನುಭವಿಸುಪಪರಿಯೊಳ್ ।
ಭೂವಲಯದೆ ಪರರೊಡವೆಗೆತಿಳಿಯಲ್ ॥೨೨॥
ಆಶೆಯುಪಡುವಾಮನುಜಂನಿಜದೊಳ್ ।
ಘಾಸಿಯುಪಡುವಂತಪ್ಪದೆಭರದೊಳ್ ॥೨೩॥
ಅನ್ಯರಕೈಗುರೆತೊಡರ್ವೀಳ್ದುಬಿಡದೆ ।
ಮಾನ್ಯತೆಯುಂಮಿಗೆಕಳಕೊಂಡುನೆಲದೆ ॥೨೪॥
ಕಳ್ಳತನವನುರೆಮಾಡಲ್ಕಾಗದು ।
ಸೊಲ್ಲಿಸಲದರಿಂಬಲ್ಕುಂದಿರ್ಪುದು ॥೨೫॥
ಪರರೊಡವೆಯುಮಿಗೆಕಂಡೊಡೆನೆಲದೊಳ್ ।
ಉರೆಮಣ್ಣಿಗೆಕಡೆಗಣಿಪ್ಪುದುಮನದೊಳ್ ॥೨೬॥
ಸ್ವಂತಪದಾರ್ಥವರಕ್ಷಿಸಿಕೊಳ್ವುದು ।
ಸಂತತಸತಿಸುತರಂಮಿಗೆಪೊರೆವುದು ॥೨೭॥

ಕಳ್ಳತನವನುರೆವಮಾಡುವನಿಳೆಯೊಳ್ ।
ಸಲ್ಲಿಸುವಂಸ್ವಪ್ರಾಣವಕೊನೆಯೊಳ್ ॥೧೮॥

ಪ್ರಾಣಹಿಂಸೆ.

ಜೀವಿಗಳಂಮಿಗೆಕೊಲ್ಲಲ್ಕಾಗದು ।
ಜೀವಿಗಳನಾತ್ಮವತ್ಭಾವಿಸುವುದು ॥೧೯॥
ಮನುಜರ್ಗೇಪರಿಯೊಳ್ನೋವಿರ್ಕುಂ ।
ಎನಸುಂಜೀವರ್ಗಾಪರಿಯಿರ್ಕುಂ ॥೨೦॥
ಸರ್ವಪ್ರಾಣಿಗಳಿಗೆಯುಳಲಿರ್ಪುದು ।
ಸರ್ವಪ್ರಾಣಿಗಳಿಗೆಶಿಟ್ಟಿರ್ಪುದು ॥೨೧॥
ಸರ್ವಪ್ರಾಣಿಗಳಿಗೆದಯಮಿರ್ಪುದು ।
ಸರ್ವಪ್ರಾಣಿಗಳಿಗೆದಿಗಿಲಿರ್ಪುದು ॥೨೨॥
ಮನುಜರ್ತಮ್ಮಯಮಕ್ಕಳನಿತರರ್ ।
ಇನಿತಂಬಾಧಿಸೆಯುಳಲಿಂಬಳಲ್ವರ್ ॥೨೩॥
ಅನ್ಯಪ್ರಾಣಿಗೆ ಸಂಕಟವಾಗಲ್ ।
ಕಣ್ಣೊಳ್ನೀರಿನಿತಂಬಿಡರರಿಯಲ್ ॥೨೪॥
ಎಲ್ಲಾ ಜೀವಿಗಳೆಂಮಯಮಕ್ಕಳ್ ।
ಸೊಲ್ಲಿಸೆಬೇರಿಲ್ಲೆಂದರಿದಿಳೆಯೊಳ್ ॥೨೫॥
ಆರಿಗುಹಿಂಸೆಯನೆಸಗಲ್ಕಾಗದು ।
ಕಾರುಣ್ಯದೊಳೆಲ್ಲರರಕ್ಷಿಸುವುದು ॥೨೬॥
ಇಲಿಯಂಕತ್ತರಿಬೋರಕೆಶಿಕ್ಕಿಸಿ ।
ಸಲೆಕೋಲಿಂತಿವಿತಿವಿದುರೆಭಂಗಿಸಿ ॥೨೭॥
ಬೆದರುವಜೀವಿಯಬೆಕ್ಕಿಸಬಾಯಿಗೆ ।
ಮುದದಿಂಕೊಟ್ಟವಲೋಕಿಸುತಂಮಿಗೆ ॥೨೮॥

ಸಂಪದಮುದುತಮುಗೊದಗಿದವೊಲ್ಸಲೆ ।
ಸೊಂಪಿಂಕೋಲಾಹಲಗಳನೆಲೆಎಲೆ ||೩೯||
ನೆಗಳುತೆವಿನೋದಮಾಂಪೆರ್ಕಿಲವರ್ ।
ಮಿಗೆಯುಂತ್ಯಂತಮುಗೊದಗಲ್ಕಜ್ಞರ್ ||೪೦||
ಅಯ್ಯೋಶಿವಶಿವಸತ್ತೆನೆಸತ್ತೆನೆ ।
ರಯ್ಯನೆಬದುಕುವಪರಿಯಂಕಾಣೆನೆ ||೪೧||
ಆರಿಗೆಕೇಡಂನಾನೆಸಗಿರ್ದೆಂ ।
ಮೀರಿದಮೃತಿಬಂದುದುಮೂಲಮದೇಂ ||೪೨||
ಎಂದುಮಹಾದುಃಖಮನುರೆಪಡುವರ್ ।
ಮುಂದದೊಳನ್ಯರನೋವಂತಿಳಿಯರ್ ||೪೩||

ದ್ರವ್ಯಾರ್ಜನೆ.

ಅರ್ಥಮಸಂಪಾದಿಸುವವನರಿವುದು ।
ವ್ಯರ್ಥದಡಂಬಮಗೆಯ್ಯಲ್ಕಾಗದು ||೪೪||
ಮಿತದಿಂಧನಮುಂವ್ಯಯಮುಂಮಾಳ್ಪುದು ।
ಪತನಸಮಯಕಲ್ಪಮಮಿಗಿಸಿಡುವುದು ||೪೫||
ಎಲ್ಲಮನೊರ್ಮೆಗೆಕಳೆಯುವನಿಳೆಯೊಳ್ ।
ಬಿಲ್ಲಂಬಲ್ಬಗ್ಗಿಸಿಮುರಿವನವೊಲ್ ||೪೬||

ಸಾಲ.

ಸಾಲಮನಾರುಂಮಾಡಲ್ಕಾಗದು ।
ಸಾಲಮೆಶೂಲಂಮರ್ತ್ಯರ್ಗರಿವುದು ||೪೭||
ಸಾಲದಭಾರಮನುಳ್ಳಾಮನುಜಂ ।
ಗಾಳಿಗೆಶಿಲ್ಕಿದಶುನಕಸಮಾನಂ ||೪೮||

ಗುಣವೊಂದಿಲ್ಲದೆಯನ್ಯರಬೇಡದೆ ।
ಪೆಣಗುತೆದೇಶಂಗಳಮಿಗೆತಿರುಗದೆ ॥೪೯॥
ಶಿವನಿತ್ತುದರೊಳ್ತೃಪ್ತಿಯುಪಡುತ್ತೆ ।
ತವೆಯಿಲ್ಲದುದರೊಳಾಶೆಯುಬಿಡುತ್ತೆ ॥೫೦॥
ಸೊಪ್ಪನ್ನಾದರುತನ್ನಯುಸದ್ಮದೆ ।
ತೆಪ್ಪನತಿನ್ನುತೆಕಾಲವಕಳೆವುದೆ ॥೫೧॥
ಲೋಕದೊಳತ್ಯುತ್ತಮತರಸೌಖ್ಯಂ ।
ಸಾಕಿದೊಂದುಮಿಗೆಮಿಕ್ಕುದುಬೇಡಂ ॥೫೨॥
ಸಾಲವಮಾಡುವಮನುಜನಗತಿಯುದು ।
ಸಾಲನತೀರಿಪಕಾಲಕೆತಿಳಿವುದು ॥೫೩॥
ಬಿಲದಿಂದಿಲಿಮಿಗೆಬಯಲಿಗೆಬರಲದು ।
ಸಲೆಪಕ್ಕಿಗಳಂಕುಕ್ಕಿಸಿಕೊಳ್ವುದು ॥೫೪॥
ಸಾಲವಮುಣಿಯರೆತೀರಿಪವೇಳೆಗೆ ।
ಸಾಲಿಗರಿಂಭಂಗಿಸಿಕೊಳ್ವಂಮಿಗೆ ॥೫೫॥

ಲೋಭ

ಅತಿಲೋಭವನುರೆಮಾಡಲ್ಕಾಗದು ।
ಮಿತದಿಂತನ್ನಲ್ಲಿರ್ದುದನೀವುದು ॥೫೬॥
ಇಲ್ಲೆಂಬುದರಿಂದುಂಟೆಂಬುದುಗುಣ ।
ಪುಲ್ಲನಾದೊಡಂಬಿಡದೀವುದುಘನ ॥೫೭॥
ಅತಿಲೋಭದಿತಿಳಿಯಬ್ಬರಹತ್ಯವ ।
ಸತತಂಸ್ತ್ರೀಹತ್ಯವಶಿಶುಹತ್ಯವ ॥೫೮॥
ಎಸಗಲ್ಕೆನಿತಘಮುಂಟನಿತರಿಯಲ್ ।
ರಸೆಯೊಳಗುಂಟದನರಿವುದುಜನಗಳ್ ॥೫೯॥

ಪೊಡೆಯಲ್ಜೀವಿಯನೆನಿತುರೆದೋಷಂ ।
ಕುಡದಿರೆಸಂಕಟದೊಳಸಿತುದೋಷಂ ||೬೦||
ಪಾಲಂಕುಡಿವಾಶಿಶುರೋಧಿಸಿದೊಡೆ ।
ಪಾಲಂಕುಡದಿರಲಘಮಲೆತಿಳಿದೊಡೆ ||೬೧||
ಪಸಿವಿಂಬಳಲುವನನ್ನವಕೇಳ್ದೊಡೆ ।
ಒಸೆದೀಯದಿರಲ್ಕಘಮಲೆತಿಳಿದೊಡೆ ||೬೨||

ಶುಚಿ.

ಸರ್ವಜನರ್ಶುಚಿಯುತರಾಗಿರ್ಪುದು ।
ಉರ್ವಿಯೊಳದರಿಂಸುಖಮುಂಟಪ್ಪುದು ||೬೩||
ಶುಚಿಯಿಂಶುಭತ್ವಮುಮಾರೋಗ್ಯಂ ।
ಶುಚಿಯಿಂಪ್ರೌಜ್ವತೆಯುರುತರಭಾಗ್ಯಂ ||೬೪||
ಶುಚಿಯಿಂದೀಶ್ವರಕೃಪಾಕಟಾಕ್ಷಂ ।
ಶುಚಿಯಿಂನಿಖಿಲೋರ್ವೀಜನವಶ್ಯಂ ||೬೫||
ಮಲಿನಾಂಬರಮಂಪೊದಿದುರೆಮೆಯ್ಯೊಳ್ ।
ಕೊಳೆಗೇಜತಾಳಿಘನದಿಂಕಂಣೊಳ್ ||೬೬||
ಎಂಜಲಧಾರೆಯುಸುರಿಸುತೆಬಾಯೊಳ್ ।
ಗುಂಜೆಸಗಿಕೂದಲುಮಿಗೆತಲೆಯೊಳ್ ||೬೭||
ಅಪಸ್ವರದನುಡಿಯಾಡುತೆನೆಲದೊಳ್ ।
ಕಪಿಯಂತೆಚರಿಪುದದುಮಿಗೆನೋಡಲ್ ||೬೮||
ಕಷ್ಟೋದ್ಯೋಗದಲಕ್ಷಣವೆಂದುರೆ ।
ಭ್ರಷ್ಟರ್ಕೆಲವರ್ತಿಳಿದಿರ್ಪರ್ನರರೆ ||೬೯||
ಅಶುಚಿಯಿನೆಸಗಿದಕಷ್ಟೋದ್ಯೋಗಂ ।
ಅಶುಭಫಲಮನೀವುದದಾವಾಗಂ ||೭೦||

ಪರಸ್ತ್ರೀಸಂಗ.

ಆವುದರೊಳ್ಸುಖಮದರೊಳ್ಕಟ್ಟಳೆ ।
ಭಾವಿಸೆತಪ್ಪಲ್ಕದೆಕಷ್ಟಂಸಲೆ ||೭೧||
ಅಪ್ಪುದುಕಟ್ಟಳೆಯಿಂದಿರಲೆಲ್ಲಂ ।
ಒಪ್ಪದಸುಖಮುಪ್ಪುದುಕುಂದಿಲ್ಲಂ ||೭೨||
ಸುಖದೊಳಗೆಲ್ಲಂರತಿಸುಖಮರಿಯಲ್ ।
ಸುಖದತಿರುಳಿದಕೆಸರ್ವರ್ಧರೆಯೊಳ್ ||೭೩||
ಸತತಂಬಯಕೆಯನಾಸುವರಾದೊಡೆ ।
ವಿತತಕ್ರಮದಪ್ಪಿನಡೆಯುತರಿದೊಡೆ ||೭೪||
ಬಹುಕಷ್ಟಕೆಶಿಲ್ಕಿತೊಳಲ್ವರನಿಶಂ ।
ಮಹಿಯೊಳಗಿದೊಂದುಕುಂದಿನಕೆಲಸಂ ||೭೫||
ಪರಸತಿಯರನುರೆಬಯಸಲ್ಕಾಗದು ।
ಉರೆನಿಜಸತಿಯೊಳ್ಸುಖದಿಂದಿರ್ಪುದು ||೭೬||
ಪರಸುದತಿಯರಿಂಪ್ರಾಣವಿನಷ್ಟಂ ।
ಪರಸುದತಿಯರಿಂಮಾನವಿನಷ್ಟಂ ||೭೭||
ಪರವಧುಗಳಿನಾರೋಗ್ಯವಿನಷ್ಟಂ ।
ಪರವಧುಗಳಿನುರೆಯರ್ಥವಿನಷ್ಟಂ ||೭೮||

ಆಚಾರ.

ಮೊದಲಾಚಾರವನಾರೋಗ್ಯಕ್ಕಂ ।
ಸದಮಲನೀತಿಯನುಷ್ಠಾನಕ್ಕಂ ||೭೯||
ಮನುಜರ್ಸುಖದಿಂಬಾಳಲ್ಕೆಂದುರೆ ।
ಘನವಂತರ್ನಿರ್ಣಯಗೆಯ್ದರ್ನೆರೆ ||೮೦||

ಆಚಾರವನಾರುಂಬಿಡಲಾಗದು ।
ಆಚಾರಂಸರ್ವರಸುಖಕಾದುದು ॥೮೧॥
ಆಚಾರಂದುರ್ವೃತ್ತಿಯಬಿಡಿಪುದು ।
ಆಚಾರಂಸತ್ಕ್ರಿಯೆಯೊಳ್ನಿಲಿಪುದು ॥೮೨॥
ಮನಸಿಗೆಬಂದಂತೆಸಗುವಮನುಜಂ ।
ಘನತರಕಷ್ಟಕೆಬೀಳ್ವಂಸಹಜಂ ॥೮೩॥
ಸೊಡರಿಗೆಮಿಗೆಬೆರಗಾಗಿಪತಂಗಂ ।
ಕೆಡೆದಿಳೆಯೊಳ್ಕಡುವಂತಿರದನಿಶಂ ॥೮೪॥
ಪೊರಗಣಬೆಳಕಿಗೆಮರುಳಾಗಿಕೆಲರ್ ।
ಪೆರರಪವೃತ್ತಿಗೆಬಿದ್ದುರೆಕೆಡುವರ್ ॥೮೫॥
ಸರ್ವವಿಮಲಾಚಾರದೆನಡೆವುದು ।
ಸರ್ವವಿಧದಸೌಖ್ಯಗಳಂಪಡೆವುದು ॥೮೬॥
ಅತ್ಯಾಚಾರವಮಾಡಲ್ಕಾಗದು ।
ಅತ್ಯಂತಹಾನಿಯುದರಿಂತಿಳಿವುದು ॥೮೭॥
ಆರೋಗ್ಯಕ್ಕೆವಿರೋಧಗಳೆನಿಸುವ ।
ಕ್ರೂರಾಚಾರಂಗಳನುಳಿಯುವುದವ ॥೮೮॥
ಆಚಾರಕ್ಕೆವಿರೋಧಗಳೆನಿಸುವ ।
ನೀಚೋದ್ಯೋಗಂಗಳನುಳಿಯುವುದವ ॥೮೯॥

ಆ ರೋ ಗ್ಯ.

ಎಲ್ಲಾಭಾಗ್ಯಗಳೊಳಗಂನೆಲದೊಳ್ ।
ಸೊಲ್ಲಿಸಲಾರೋಗ್ಯದಭಾಗ್ಯಂದಲ್ ॥೯೦॥
ಶ್ರೇಷ್ಠಂಮಿಗೆಎನಿಸಿರ್ಪುದುನಿಜದಿಂ ।
ಕಷ್ಟದಿನದನಾರ್ಜಿಸುವುದುಮುದದಿಂ ॥೯೧॥

ಭೋಜನಪಾನಂಗಳೊಳುರತಿಳಿವುದು ।
ಭೂಜನರರಿದೆಚ್ಚರದಿಂದಿರ್ಪುದು ||೯೨||
ದೇಹಸ್ಥಿತಿಯಂ ತಿಳಿದುರ್ವರೆಯೊಳ್ ।
ಆಹಾರವಕೊಂಬುದುಮಿಗೆ ಬಗೆಯಲ್ । ||೯೩||
ದುಷ್ಟಾಹಾರವಭುಂಜಿಸಲಾಗದು ।
ದುಷ್ಟಪಾನಮಂ ಸೇವಿಸಲಾಗದು ||೯೪||
ಆಹಾರದಿಸುಖಕರದಾರೋಗ್ಯಂ ।
ಆಹಾರದಿನೆಲ್ಲಾವಿಧರೋಗಂ ||೯೫||
ಆವಪದಾರ್ಥವನಂಗೀಕರಿಪುದು ।
ಆವಪದಾರ್ಥವದೂರೀಕರಿಪುದು ||೯೬||
ಎಂಬುರುವಿಮರ್ಶೆಯಂಮಿಗೆಮಾಡುತೆ ।
ಕೊಂಬುದುವಸ್ತುಗಳಂಮಿಗೆನಲಿವುತೆ ||೯೭||
ಸರಿರಂದೃಢವಾಗಿರಬೇಕಾದೊಡೆ ।
ಉರುದೀರ್ಘಾಯುವಪೊರ್ದುವುದಾದೊಡೆ ||೯೮||
ಅಂಗಸಾಧನೆಯುಬಿಡದುರೆಮಾಳ್ಪುದು ।
ಪಿಂಗದೆಚಿತ್ತೈಕತೆಯಂತಾಳ್ವುದು ||೯೯||
ಉತ್ತಮವಸ್ತುಗಳಂಭುಂಜಿಸುವುದು ।
ಗೊತ್ತಿನನಿದ್ರೆಗಳಂಮಿಗೆಮಾಳ್ಪುದು ||೧೦೦||
ಕಾಲವಿಸರ್ಜನೆಗಳಸಲೆಗೆಯ್ವುದು ।
ಮೇಲಿಂದ್ರಿಯನಿಗ್ರಹದಿಂದಿರುವುದು ||೧೦೧||
ಅನುಭವಹೀನರಕ್ಕೈಯೊಳ್ತಳಿವುದು ।
ಮನುಜರ್ಮರ್ದುಗಳಂಕೊಳಲಾಗದು ||೧೦೨||
ರೋಗಂಬಂದಾಗಳ್ಮಿಗೆಬಗೆವುದು ।
ಆಗದವಸ್ತುಗಳಂಮೆಲಲಾಗದು ||೧೦೩||

ವಸ್ತುಗಳಂಮಿಗೆಶೋಧಿಸಿಯುಣುವುದು।
ವಸ್ತುಗಳಂಪರಿಕಿಸಿಮಿಗೆತಿಂಬುದು ॥೧೦೪॥
ಆಹಾರದೊಳೆರಡುವಿಧಂ ತಿಳಿವುದು।
ಊಹಿಸಲುತ್ತಮಕನಿಷ್ಠಮೆಂದದು ॥೧೦೫॥
ತಿಂಬುವುದುತ್ತಮವಸ್ತುವಪೂರ್ಣದಿ।
ತಿಂಬುದುಕನಿಷ್ಠವಸ್ತುವನಲ್ಪದಿ ॥೧೦೬॥
ಪೊತ್ತಿನನಿಯಮವನೂಟದೊಳಿಡುವುದು।
ಪೊತ್ತೊಂದೆರಡರಗೊತ್ತಿಂದುಂಬುದು ॥೧೦೭॥

ಮಿತ.

ಎಲ್ಲವಿಷಯದೊಳ್ಮಿತಿಯಿಂದಿರ್ಪುದು।
ಸೊಲ್ಲಿಸಲದರಿಂಬಹುಸುಖಮಿರ್ಪುದು ॥೧೦೮॥
ಆವುದಕಾದೊಡಮಳತೆಯನರಿವುದು।
ಭಾವಿಸಲಳತೆಯಮೀರಲ್ಕಾಗದು ॥೧೦೯॥
ಅತಿಶೀತಮುಮತಿಶಾಖಮುಮಿಳೆಯೊಳ್।
ಚ್ಯುತಿಯಂದೇಹಕೆಮಾಳ್ಪವು ತಿಳಿಯಲ್ ॥೧೧೦॥
ಸಮಸೀತೋಷ್ಣವದಾರೋಗ್ಯವನುರೆ।
ಕ್ಷಮೆಯೊಳಗೆಲ್ಲರ್ಗಂಕುಡುವುದುನೆರೆ ॥೧೧೧॥
ಅತಿಸರ್ವವಿಧದೊಳರಿಯಲ್ಕಷ್ಟಂ।
ಅತಿಲೋಭದಿಕೌರವನುರೆಕೆಟ್ಟಂ ॥೧೧೨॥
ಅತಿದಾನದಿಕರ್ಣಂಮಿಗೆಕೆಟ್ಟಂ।
ಅತಿಕಾಮದಿರಾವಣನುರೆಕೆಟ್ಟಂ ॥೧೧೩॥
ಮಿತಿಯಿಂದೆಕೆಟ್ಟುದೊಳ್ಳಿತ್ತಪ್ಪುದು।
ಅತಿಯಿಂದೊಳ್ಳಿತ್ತುಕೆಟ್ಟುದಪ್ಪುದು ॥೧೧೪॥

ಅಹಿಫೇನವಮಿತದಿಂಸೇವಿಸಲದು।
ಮಹಿಯೊಳಗುರುತರದೌಷಧಿಯುಪ್ಪುದು ॥೧೧೫॥
ಅದನಮಿತದಿನುರೆಸೇವಿಸಲರಿವುದು।
ಬದವಿದಕಟುತರಘನವಿಷಮುಪ್ಪುದು ॥೧೧೬॥
ಘೃತಮುಂತಕ್ಕನಿತಂಸೇವಿಸಲದು।
ಅತಿಶಯದಿಂಕಾಯಕೆಬಲಮೀವುದು ॥೧೧೭॥
ಮಿತಮೆಣಿಸದೆಮಿಗೆತಿಂದೊಡೆತಿಳಿವುದು।
ಅತಿಕುಂದಕದಿಂ ಕಷ್ಟವನೀವುದು ॥೧೧೮॥

ಕೆಲಸ.

ಸರ್ವಸ್ಸಂಪತ್ತುಗಳಂ ಪಡೆವೊಡೆ।
ಉರ್ವುತೆಕೆಲಸವಮಾಳ್ಪುದುತಿಳಿವೊಡೆ ॥೧೧೯॥
ಕೆಲಸವಮಾಳ್ಪಗೆತಿಳಿಯಲ್ಜಗದೊಳ್।
ಪಲವುಂಲಾಭಗಳಪ್ಪುವುನಿಜದೊಳ್ ॥೧೨೦॥
ಕೆಲಸದಿನರರಿಗೆ ವಿದ್ಯಂಲಭಿಪುದು।
ಕೆಲಸದಿನರರಿಗೆ ವಿತ್ತಂಲಭಿಪುದು ॥೧೨೧॥
ಕೆಲಸದಿನರರಿಗೆ ಧೈರ್ಯಂಬರ್ಕುಂ।
ಕೆಲಸದಿನರರಿಗೆ ಶೌರ್ಯಂಬರ್ಕುಂ ॥೧೨೨॥
ಕೆಲಸದಿನರರಿಗೆ ಸುಗುಣಂದೊರೆಗುಂ।
ಕೆಲಸದಿನರರಿಗೆ ಸುಕೃತಂದೊರೆಗುಂ ॥೧೨೩॥
ಕೆಲಸವನಿಳೆಯೊಳ್ಮಾಡುವಮನುಜಂ।
ಸಲೆಧಾರಿಣಿಯುಂಕೈಕೆಳಗಾಳ್ವಂ ॥೧೨೪॥

ವಿರಾಮ

ಆದೊಡೆಕೆಲಸವಮಾಡುವರರಿವುದು।
ಮೋದದೆತಕ್ಕವಿರಾಮವಪಡೆವುದು ॥೧೨೫॥
ವಿರಾಮದಿಂದಾಯಾಸಂಪರಿವುದು।
ವಿರಾಮದಿಂದುತ್ಸಾಹಂಬಲಿವುದು ॥೧೨೬॥
ವಿರಾಮಕೆಡಲುತನುಕ್ಷಯಮಪ್ಪುದು।
ವಿರಾಮಕೆಡಲುಮನಕ್ಷಯಮಪ್ಪುದು ॥೧೨೭॥
ಭೋಜನಲುಪೋಷಭೋಗಂಕಷ್ಟಂ।
ಸಾಜದೆತಿಳಿಯಲ್ರಾಗವಿರಾಗಂ ॥೧೨೮॥
ಎಚ್ಚರಿಕೆನಿದ್ರೆಯೋದುವಿಹಾರಂ।
ನಿಚ್ಚಂಸಮನಾಗಿರಬೇಕುಕರಂ ॥೧೨೯॥

ಎಚ್ಚರ.

ಎಲ್ಲವಿಷಯದೊಳ್ಮನುಜರ್ಜಗದೊಳ್।
ಸೊಲ್ಲಿಸಲೆಚ್ಚರವಿರ್ಪುದುನಿಜದೊಳ್ ॥೧೩೦॥
ಎಚ್ಚರವಿಲ್ಲದಮನುಜಂಧರೆಯೊಳ್।
ನಿಚ್ಚಮಪಾಯಕೆಶಿಲ್ಕುವನರಿಯಲ್ ॥೧೩೧॥
ಸೀಮೆಯತೈಲವನುರಿಸಲ್ಕಾಗದು।
ಪ್ರೇಮದೆಮದ್ದುಗಳಂಸುಡಲಾಗದು ॥೧೩೨॥
ಕಾಣದರ ಗೃಹದೆ ಮಲಗಲ್ಕಾಗದು।
ಕಾಣದರ ಗೃಹವ ಸೇರಿಸಲಾಗದು ॥೧೩೩
ನದಿಕೆರೆಗಳಮಗ್ಗುಲೊಳುರೆ ತಿಳಿವುದು।
ಸದನಂಗಳಮಿಗೆಕಟ್ಟಲ್ಕಾಗದು ॥೧೩೪॥

ಪುಲ್ಲಮೆದೆಗಳಾಬಳಿಯೊಳ್ತಿಳಿವುದು।
ನಿಲ್ಲದೆಪಾಕವಗೈಯಲ್ಲಾಗದು ||೧೩
ದಾರಿಗಳೊಳ್ಮಗೆಪಕ್ಕದೆನಡೆವುದು।
ಮೀರುವರಥಗಳಿಗಿದಿರ್ವರಲಾಗದು ||೧೩
ಇರುಳೊಳ್ಪಯಣವಗೈಯಲ್ಲಾಗದು।
ಅರಿಯದಜಾಗದೆಚರ್ಚಿಸಲಾಗದು ||೧೩
ಗದ್ದಲಗಳಿಗುರೆ ನುಗ್ಗಲ್ಲಾಗದು।
ಕದ್ದವಸ್ತುಗಳ ಕೊಳ್ಳಲ್ಕಾಗದು ||೧೩
ದೀಪಗಳಡಿಯೊಳ್ಮಂಡಿಸಲಾಗದು।
ಸೂಪವಕಂಡಲ್ಲುಣ್ಣಲ್ಲಾಗದು ||೧೩
ನೆರದಜನಗಳೊಳ್ಕೊನೆಯಲ್ಲಿರ್ಪುದು।
ಪರಿಪರಿಯಾಟದೆಜೋಕೆಯೊಳಿರ್ಪುದು ||೧೪
ಮುರಿವರಥಗಳೊಳ್ಪೋಗಲ್ಲಾಗದು।
ಉರುಳ್ವಮನೆಗಳೊಳ್ವಾಸಿಸಲಾಗದು ||೧೪
ಜೀವಿಗಳೊಡನಾಟದೆಮಿಗೆತಿಳಿವುದು।
ಭಾವಿಸಲೆಲ್ಲಜೋರ್ಕೆಯೊಳಿರ್ಪುದು ||೧೪
ಶ್ವಾನವಂನೋಡಿಯೋಡಲ್ಲಾಗದು।
ಹೀನಗಾರ್ಧಬನಬಳಿನಿಲಲಾಗದು ||೧೪
ಕರಡಿಯುಕಂಡೊಡೆಬೆಂಕಿಯತೋರ್ಪುದು।
ಉರೆಪುಲಿಯುಕಾಣೆಶಬ್ದವಮಾಳ್ಪುದು ||೧೪
ಉರಗನಿದಿರ್ಚಲ್ಸೊಟ್ಟಗೋಡುವುದು।
ಉರೆಕೋಣಬೆದರೆದೂರಕೆಸರಿವುದು ||೧೪
ಜೀವಿಗಳಾವಂಕೆಣಕಲ್ಲಾಗದು।
ಜೀವಿಗಳನೆಲದೆ ತುಳಿಯಲ್ಲಾಗದು ||೧೪

ಸರ್ವಕೈರ್ಯೊಳ್ದಂಡವಪಿಡಿದುರೆ।
ಉರ್ವಿಯೊಳನಿಶಂಚರಿಸುವುದಿರದುರೆ ॥೧೪೭॥
ಅದರಿಂಪ್ರಾಣದರಕ್ಷಣೆಯುಪ್ಪುದು।
ಅದರಿಂದಕ್ಷಯುಧೈರ್ಯಂಬರ್ಪುದು ॥೧೪೮॥

ಪಗರಗೊಡವೆ.

ಪರರಗೊಡವೆಗುರೆಪೋಗಲ್ಕಾಗದು।
ಪರರುರೆಹಿಂಸಿಸಬರಲಿದಿರಿಸುವುದು ॥೧೪೯॥
ಬರಿದೆಯನ್ಯರಂದಂಡಿಸೆದೋಷಂ।
ಉರೆನಿಜರಕ್ಷಣೆಗದುನಿರ್ದೋಷಂ ॥೧೫೦॥
ಬಿಸಿಲುರೆಬರೆಘನದಿಂಕೊಡೆವಿಡಿವುದು।
ರಸೆಯೊಳ್ಬೆಳದಿಂಗಳ್ಬರಲೇಕದು ॥೧೫೧॥

ಅರಿಗಳ ಬಲಪರೀಕ್ಷೆ.

ಅರಿಗಳಬಲಮುಂಪರಿಕಿಸಿನೆಲದೊಳ್।
ಉರೆಜಗಳಕೆಪೋಗುವುದಿರದರಿಯಲ್ ॥೧೫೨॥
ಶತ್ರುಗಳಬಲಂ ಪಿರಿದಾಗಿರ್ದೊಡೆ।
ಧಾತ್ರಿಯೊಳುರೆಪಿಂದೆಗೆವುದುತಿಳಿದೊಡೆ ॥೧೫೩॥
ಅವರಬಲಂಸಾಮಾನ್ಯಂಗಂಡೊಡೆ।
ತವೆಜಗಳಕೆನುಗ್ಗುವುದಿರದರಿದೊಡೆ ॥೧೫೪॥
ಪೊಳೆಯೊಳ್ಪರಿವಜಲಂಬಲವಾಗಿರೆ।
ಸಲೆದಾಂಟಲ್ಯತ್ನಿಸಲಾಗದುನೆರೆ ॥೧೫೫॥
ಜಲಮದುಮಿಗೆತೆಳ್ಳಗೆಪರಿಯುತ್ತಿರೆ।
ಬಲದಿಂದಾಂಟಿತಡಿಯುಸೇರುವುದುರೆ ॥೧೫೬॥

ಪರೋಪಕಾರ.

ಮನುಜರ್ಪರೋಪಕಾರಕೆಜಗದೊಳ್|
ತನುವಂಸವೆಸುವುದಿಂದತಿಭರದೊಳ್ ||೧೫೭||
ತರುವೆಲ್ಲರ್ಗಂಫಲಗಳನೀವುದು|
ಸರಸಿಯದಮಲಿನಜಲಮಂಕುಡುವುದು ||೧೫೮||
ಧೇನುವದೆಲ್ಲರ್ಗಂಪಾಲೀವುದು|
ಶ್ವಾನಂಜೀವದರಕ್ಷಣೆಗೆಯ್ವುದು ||೧೫೯||
ಸರ್ವರಭಿಮಾನದಿಂಕೂಡಿರ್ಪುದು|
ಉರ್ವಿಯೊಳುನ್ನತರಿಗೆ ಭೂಷಣಮದು ||೧೬೦||
ದೇಶಾಭಿಮಾನಮದು ಮೊದಲನೆಯದು|
ಭಾಷಾಭಿಮಾನಮುರೆ ಎರಡನೆಯದು ||೧೬೧||
ಮತವಾತ್ಸಲ್ಯಂಮಿಗೆ ಮೂರನೆಯದು|
ಸತಿಸುತರಕ್ಕರೆಸಲೆನಾಲ್ಕನೆಯದು ||೧೬೨||
ಅಭಿಮಾನಕೆಮಿಗೆಹರಣಂಗುಡುವುದು|
ಅಭಯದಿಸರ್ವೋದ್ಧಾರವಗೆಯ್ವುದು ||೧೬೩||
ಪುಟ್ಟಿದಮನುಜಂ ಸಾವುದುಸತ್ಯಂ|
ಕಟ್ಟಭಿಮಾನಕೆಮಡಿಯಲ್ಶ್ರೇಷ್ಠಂ ||೧೬೪||

ಲೀನತೆ.

ಆವುದಕಂಮಿಗೆಯತ್ನವಗೆಯ್ವುದು|
ಭೂವಲಯದೊಳ್ವಿಲೀನತೆಕೂಡದು ||೧೬೫||
ಜಯಮಾಗಲ್ಸಂತೋಷವಪಡುವುದು|
ಜಯಂಗೆಡಲ್ಚಿಂತೆಯಪಡಬಾರದು ||೧೬೬||

ಭಾವಿಯತೋಡಲ್ವಾರಿಯುದುರೆಬರೆ।
ತೀವಿದಸಂತಸವಡುವುದುಸರಿಯುರೆ ॥೧೬೭॥
ಹೀನಪುಣ್ಯದಿಂಜಲಮದುಬರದಿರೆ।
ಏನದರಿಂದುರ್ವ್ಯಥೆಯಂಪಡಲುರೆ ॥೧೬೮॥

ಗರ್ವದನುಡಿ

ಗರ್ವದಿಜನರಂನುಡಿಯಲ್ಕಾಗದು।
ಸರ್ವವಿನಾಶಮದದರಿಂದಪ್ಪುದು ॥೧೬೯॥
ಗರ್ವದನುಡಿಯಿಂಕ್ರಿಯಗಳ್ಕೆಡುವವು।
ಗರ್ವದನುಡಿಯಿಂವೈ[illegible]ಗಳುದಿಪವು ॥೧೭೦॥
ಗರ್ವದನುಡಿಯಿಂತೊಡರ್ಗಳ್ಬರ್ಪವು।
ಗರ್ವದನುಡಿಯಿಂಘನತೆಗಳಳಿವವು ॥೧೭೧॥
ವಿನಯದಿಜನರಂಮಾತಾಡಿಸುವುದು।
ಘನಸೌಖ್ಯಂಬಿಡದದರಿಂದಪ್ಪುದು ॥೧೭೨॥
ವಿನಯದಮಾತಿಂವಿಜಯಗಳಪ್ಪವು।
ವಿನಯದಮಾತಿಂತೊಡರ್ಗಳ್ಪೋಪವು ॥೧೭೩॥
ವಿನಯದಮಾತಿಂನೇಹಗಳುದಿಪವು।
ವಿನಯದಮಾತಿಂಗುರುತೆಗಳಪ್ಪವು ॥೧೭೪॥
ತಲೆಬಲವಾಗಿಹುದೆಂದುರೆಕಲ್ಲಂ।
ಸಲೆಪಾಯೆಪುಣ್ಣಹುದಿಶಿರಮೆಲ್ಲಂ ॥೧೭೫॥
ಮೆಲ್ಲನೆತಲೆಯಂಮೇಲೊರಗಿಸಲುರೆ।
ನಿಲ್ಲದೆಯುದೆತಲೆದಿಂಬಪ್ಪುದುನೆರೆ ॥೧೭೬॥

ನಾಲ್ಕು ಪದಾರ್ಥಗಳು.

ಮನುಜಂಸುಖದಿಂಬಾಳಲ್ಕರಿವುದು।
ಘನದಿಂನಾಲ್ವಸ್ತುಗಳಂಪಡೆವುದು ॥೧೭೭॥

ಅವುಕರವಮಾವೆಂದೊಡೆತಿಳಿವುದು।
ತವೆಸದ್ವಿದ್ಯವಕಲಿಯುವುದೊಂದದು ॥೧೬೮॥
ಬಳಿಕುರುವಿತ್ತವಗಳಿಸುವುದೊಂದದು।
ಸಲೆಯಾರೋಗ್ಯವಪಡೆಯುವುದೊಂದದು ॥೧೬೯॥
ನಿರ್ಮಲಗುಣಮಂಗಳಿಸುವುದೊಂದದು।
ಮರ್ಮವನಿದನೆಲ್ಲರ್ಗೆತಿಳಿವುದು ॥೧೭೦॥

ಜನಾಪವಾದ

ದುರ್ಜನರುರೆಕೇಡಿನಮಾತಾಡಲ್।
ವರ್ಜಿಸದಿರ್ಪುದುಧೈರ್ಯವತಿಳಿಯಲ್ ॥೧೭೧॥
ಪಿಡಿದಿರ್ಪರುಕಾರ್ಯವಬಿಡದಿರ್ಪುದು।
ಅಡಿಗಡಿಗಪಜಯಬಂದೊಡೆನಿಲ್ವುದು ॥೧೭೨॥
ಅಪಜಯಮುರೆಬರ್ಪುದುಮಿಗೆಸಹಜಂ।
ಅಪರಮಿತದಿಯತ್ನಿಸುವುದುಮನುಜಂ ॥೧೭೩॥
ಆದೊಡೆಸಜ್ಜನರಾಕ್ಷೇಪಿಸಿದೊಡೆ।
ಆದಂಬಿಡದದನೆಣಿಪುದುತಿಳಿದೊಡೆ ॥೧೭೪॥
ಸಜ್ಜನರಾಕ್ಷೇಪಣೆಮಿಗೆನೆಲದೊಳ್।
ಸಜ್ಜುಗೊಳಿಸುವುದುಸುಗುಣವನಿಜದೊಳ್ ॥೧೭೫॥
ಅದರಿಂಸಜ್ಜನರೊರೆದಂತೆಲ್ಲರ್।
ಪದಪಿಂವರ್ತಿಸುವುದುಮಿಗೆಬಲ್ಲರ್ ॥೧೭೬॥
ತನೆಸಜ್ಜನರರಿಯಲ್ಮಿಗೆನೆಲದೊಳ್।
ರವಿಯಂತಿರ್ಪರ್ತಿಳಿಯಲ್ನಿಜದೊಳ್ ॥೧೭೭॥
ಕುಡುವಂರವಿಭೂಮಿಗೆಕಣ್ಬೆಳಕಂ।
ಕುಡುವರ್ಸಜನರ್ತಿಳಿವಿನಬೆಳಕಂ ॥೧೭೮॥

ವಸ್ತ್ರಾಲಂಕಾರವಾಗ್ಭೂಷಣ.

ಸರ್ವರ್ವಸ್ತ್ರಾಲಂಕೃತರಾಗುರೆ।
ಉರ್ವಿಯೊಳಿರ್ಪುದುಸತತಂಬಿಡದುರೆ ॥೧೮೯॥
ಬಟ್ಟೆಯಭೂಷಣದಿಂಮಿಗೆತಿಳಿವುದು।
ನೆಟ್ಟನೆಸಂಪೂಜ್ಯತೆಯದುಬರ್ಪುದು ॥೧೯೦॥
ಸರ್ವರ್ವಾಗ್ಭೂಷಣಯುತರಾಗುರೆ।
ಉರ್ವಿಯೊಳಿರ್ಪುದುಮನುಜರ್ಬಿಡದುರೆ ॥೧೯೦॥
ಮಾತಿನಲಂಕಾರದಿಮಿಗೆತಿಳಿವುದು।
ಭೂತಲದೊಳ್ಸನ್ಮಾನ್ಯತೆಬರ್ಪುದು ॥೧೯೨॥

ಅನ್ಯರಭಯ.

ಪರರಿಗೆಧರೆಯೊಳ್ಭಯಪಡಬಾರದು।
ಪರಿಹಾಸ್ಯಕ್ಕಾಸ್ಪದಕುಡಬಾರದು ॥೧೯೩॥
ಇದಿರಿಸಲುರುವೈರವತೋರಿಸುವುದು।
ಸದಯದೊಳರೆಶಾಂತಿಯದರ್ಶಿಸುವುದು ೧೯೪॥
ಓಡಲ್ನಾಯುರೆಯಟ್ಟುತೆಬರ್ಪುದು।
ಗಾಢದಿನಿದಿರಿಸೆಹಿಂದಕೆಸರಿವುದು ॥೧೯೫॥

ಸತಿಪತಿಸಂಬಂಧ.

ಸತಿಪತಿಗಿರ್ಪುರುಸಂಬಂಧವನೆಲೆ।
ಕ್ಷಿತಿಜನರೆಲ್ಲರ್ತಿಳಿದಿರ್ಪುದುಸಲೆ ॥೧೯೬॥
ಸತಿಯುರೆಬೀಜದಪೊರೆಸಿಪ್ಪೆಯವೋಲ್।
ಪತಿತಾನೊಳಗಿರ್ಪುರುಬೀಜದವೋಲ್ ॥೧೯೭॥
ಬೀಜಂಸಿಪ್ಪೆಯದೊಂದಾಗಿರ್ದೊಡೆ।
ಸಾಜದೆವೃಕ್ಷಂಪುಟ್ಟುವುದರಿದೊಡೆ ॥೧೯೮॥

ಬೀಜಂಸಿಪ್ಪೆಯುಂಭಿನ್ನಿಸಲಾಗಳ್।
ಸೋಜಿಗಮೆಂದ್ರುವಮಾದಿಸವದಾಗಳ್ ||೧೯೯||
ಸತಿಪತಿಯೀರ್ವರುಮೊಂದಾಗಿರ್ದೊಡೆ।
ನುತಸಂಸಾರಂಬೆಳೆಯುವುದರಿದೊಡೆ ||೨೦೦||
ಅವರೀರ್ವರುಮುರೆಭೇದಿಸಲಾಗಳ್।
ತವೆಸಂಸಾರಂಬೆಳೆಯದದಾಗಳ್ ||೨೦೧||
ಸತಿಪತಿಯೊಳ್ಸವಿಧೇಯತೆಯಿಡುವುದು।
ಪತಿಸತಿಯೊಳ್ಸಪ್ರೀತಿಯನಿಡುವುದು ||೨೦೨||
ಸತಿಪತಿಗುರೆಪಡಿನುಡಿಗುಡಲಾಗದು।
ಪತಿಸತಿಯಂಬಹುದಂಡಿಸಲಾಗದು ||೨೦೩||
ಸತಿಪತಿಗೆಮತಿಯಪೇಳಲ್ತಕ್ಕುದು।
ಪತಿಸತಿಗಾಜ್ಞೆಯಮಾಡಲ್ತಕ್ಕುದು ||೨೦೪||
ಚಂದದಿನಿಂತಿವರಿಳೆಯೊಳ್ನಡೆಯಲ್।
ಕುಂದಾಗದುಸಂಸಾರಕೆತಿಳಿಯಲ್ ||೨೦೫||

ಮಕ್ಕಳರಕ್ಷಣೆ.

ಮಕ್ಕಳಪಡೆಯಲ್ಮನುಜರ್ಧರೆಯೊಳ್।
ತಕ್ಕದಮಾಡಲ್ಸಾರ್ಥಕಮರಿಯಲ್ ||೨೦೬||
ಮಕ್ಕಳಿಗೆಲ್ಲಾಸಂಪತ್ತಿಯನುರೆ।
ಅಕ್ಕರೆಯಿಂಪಿರಿಯರ್ಕೊಡುವುದುನೆರೆ ||೨೦೭||
ಮಕ್ಕಳಿಗುರೆಯಾರೋಗ್ಯವಕೊಡುವುದು।
ಮಕ್ಕಳಿಗುತ್ತಮವಿದ್ಯವಕೊಡುವುದು ||೨೦೮||
ಮಕ್ಕಳಿಗಕ್ಷಯಧನವಂಕೊಡುವುದು।
ಮಕ್ಕಳಿಗಮಲಿನಗುಣವಂಕೊಡುವುದು ||೨೦೯||

ಮಕ್ಕಳುಗಳಬಹುದಂಡಿಸಲಾಗದು।
ಮಕ್ಕಳುಗಳನತಿಲಾಲಿಸಲಾಗದು ॥೨೧೦॥
ಮಕ್ಕಳಗೆಕಲೆಯುರುಚಿಯುಂತೋರ್ಪುದು।
ಮಕ್ಕಳಗೆವಿನೋದಂಗಳಮಾಳ್ಪುದು ॥೨೧೧॥
ಪರರಸದ್ಮದಿಂಸೊಸೆಯಾಗಿಬರುವ।
ತರುಣಿಯುಬಿಡದುರೆತಾಳುತೆಕರುಣವ ॥೨೧೨॥
ಚೆಂನಿಂಸ್ವಂತಮಗಳವೊಲ್ಪೊರೆವುದು।
ಭಿಂನಭಾವಗಳನೆನಸುಂಬಿಡುವುದು ॥೨೧೩॥
ಶಿಕ್ಷೆಯುಮಕ್ಕಳ್ಗಡಚರ್ಯವೆಡೆಯೊಳ್।
ರಕ್ಷೆಯುಮರೆಯಲ್ಕಾಗದುತಿಳಿಯಲ್ ॥೨೧೪॥
ಮಕ್ಕಳತಾಡನಗೆಯ್ವೆಡೆತಿಳಿವುದು।
ಪಕ್ಕೆತಲೆಯುಬಳಿಪೊಡೆಯಲ್ಕಾಗದು ॥೨೧೫॥
ಕೈಕಾಲೆಡೆಯೊಳ್ಮೆಲ್ಲನೆಪೊಡೆವುದು।
ಲೌಕಿಕರಿದನುರೆಬಿಡದಾಚರಿಪುದು ॥೨೧೬॥

ಶಕುನಸ್ವಪ್ನಗಳು.

ಶಕುನಸ್ವಪ್ನವಕಳೆಯಲ್ಕಾಗದು।
ಅಕುಟಿಲದಿಂದವುಸರ್ವರ್ತಿಳಿವುದು ॥೨೧೭॥
ಮುಂದಿನಸೂಚನೆಗಳವಿಗೆಪೇಳ್ವವು।
ಚಂದದಿನೆಲ್ಲವನರಿಯುತೆಸತತವು ॥೨೧೮॥
ಮಾಡುವೆಚ್ಚರಿಕೆಗಳನುರೆಮಾಳ್ಪುದು।
ಕೇಡುರೆಬರ್ಪುದತಪ್ಪಿಸಿಕೊಳ್ವುದು ॥೨೧೯॥
ಪೊಸಘಟತೈಲದಭಾಂಡಂಕಾಷ್ಠಂ।
ಸಿಸದದಿನೋರ್ವದ್ವಿಜಗೋಳಾಟಂ ॥೨೨೦॥

ಮುಸಿವೈಬೋಳಯುರಕ್ತದದೇಹಂ।
ಉಸುರಲ್ಕಿತ್ಯಾದಿಯುದುಶ್ಶಕುನಂ ॥೨೨೧॥
ಬಳೆಯಾಮಲಾರಪುಷ್ಪಕರಂಡಂ।
ಸಲೆತುಂಬಿದಕುಂಭದ್ವಯಹೆಂಡಂ ॥೨೨೨॥
ವರಸೌಮಂಗಲೆಫಲತತಿಮಾಂಸಂ।
ಅರಿಯಲ್ಕಿತ್ಯಾದಿಯುಶುಭಶಕುನಂ ॥೨೨೩॥
ವಿವಾಹಸಂಭ್ರಮಜನಗಳಕೂಟಂ।
ತವೆಪಕ್ವಾನ್ನಾದಿಯುಘನದೂಟಂ ॥೨೨೪॥
ಮೆರವಣಿಗೆಯುಭೀಕರಜನದರ್ಶಂ।
ಬರೆಯಲ್ಕಿತ್ಯಾದಿಯುದುಸ್ವಪ್ನಂ ॥೨೨೫॥
ವರಭಸ್ಮಂರುದ್ರಾಕ್ಷಂಲಿಂಗಂ।
ಅರಲಿನವನರವ್ಯಸ್ತ್ರೀಯುಂಗಂ ॥೨೨೬॥
ವೃಡಪ್ರೂಜನೆಶಿವಯೋಗಿಯುದರ್ಶಂ।
ನುಡಿಯಲ್ಕಿತ್ಯಾದಿಯುಸುಸ್ವಪ್ನಂ ॥೨೨೭॥

ಪರೋಪಕಾರದಲ್ಲಿ ಜಾತಿವರ್ಜನೆ.

ಮನುಜಂಪರೋಪಕೃತಿಯಂಗೆಯ್ವೊಡೆ।
ಎಣಿಸಲ್ಕಾಗದುಜಾತಿಯತಿಳಿದೊಡೆ ॥೨೨೮॥
ತಕ್ಕವರಾರಾದೊಡಮಾಗಲಿನೆರೆ।
ಚಕ್ಕನೆಯುಪಕೃತಿಗೆಯ್ವುದುಬಿಡದುರೆ ॥೨೨೯॥
ಸಲೆಸುಖಸಮಯದೆಜಾತಿಯುದೆಲ್ಲಂ।
ಅಳಲೊಳ್ಜಾತಿಯುದರಿಯಲ್ಕಿಲ್ಲಂ ॥೨೩೦॥
ಊಟದೆಪಾನದೆಜಾತಿಯುದೆಲ್ಲಂ।
ಕಾಟದೊಳುಪಕರಿಪುದರೊಳದಿಲ್ಲಂ ॥೨೩೧॥

ಕೆಲವಿಷಯಗಳಲ್ಲಿ ಗೋಪ್ಯ.

ಧರೆಯೊಳ್ಕೆಲವಿಷಯಂಗಳಂ(ತಿಳಿವುದು)।
ಅರಿದರ್ಪರರಿಗೆಪೇಳಲ್ಕಾಗದು ||೨೩೨||
ತನಗಾದಪಮಾನವಗೃಹಭಿನ್ನವ।
ಧನದಾರ್ಜನೆಯಂಧನದುರುನಷ್ಟವ ||೨೩೩||
ಪಂಕಟಕಕೆಪಣಸಹಿತಪೋಪುದಂ।
ಉರುತರಕಾರ್ಯದಬಲ್ರಹಸ್ಯವಂ ||೨೩೪||
ರಸೆಯೊಳ್ಪ್ರಾಜ್ಞಂಮಿಗೆಎನಿಸಿದನುರೆ।
ಉಸುರಲ್ಕಾಗದುಪರರಿಗೆಬಿಡದುರೆ ||೨೩೫||

ಲಗ್ನವಿಷಯ.

ಪುರುಷಸ್ತ್ರೀಯರುಸುಖದಿಂಬಾಳಲ್।
ಉರೆಮದುವೆಗಳಂಮಾಳ್ಪುದುತಿಳಿಯಲ್ ||೨೩೬||
ಅತಿವ್ರಯಗಳಂಮದುವೆಗಳೊಳ್ನರೆ।
ಕ್ಷಿತಿಯೊಳ್ಮಾಡಲ್ಕಾಗದುನರರುರೆ ||೨೩೭||
ತರುಣಿಯರಿಗೆತೆರಗಳಕೊಳಲಾಗದು।
ವರರಿಗೆದಕ್ಷಿಣೆಗಳಕೊಳಲಾಗದು ||೨೩೮||
ಪೆಣ್ಣುಗಳಂಮುದುಕರಿಗುರೆತಿಳಿಯಲ್।
ಸಂನುತರುರೆಕುಡಲಾಗದುಧರೆಯೊಳ್ ||೨೩೯||
ಚೆಂಣರಿಗುದ್ವಾಹಗಳಂತಿಳಿಯಲ್।
ಸಂನುತರೆಸಗಲ್ಕಾದುಧರೆಯೊಳ್ ||೨೪೦||
ಪೆಂಣುಗಳಂತರುವೊಡೆಮಿಗೆತಿಳಿವುದು।
ಚೆಂಸಿಂವಂಶವಪರಿಕಿಸಿತರುವುದು ||೨೪೧||
ತರುಣಿಯರಂಕೊಡುವೊಡೆಮಿಗೆತಿಳಿವುದು।
ಪುರುಷನಗತಿಯಂಪರಿಕಿಸಿಕುಡುವುದು ||೨೪೨||

ಬಂದೇಜಾತಿಯೊಳುಪಭೇದಗಳಿರೆ।
ಕುಂದದೆಸಂಬಂಧವಬೆಳಸುವುದುರೆ ॥೨೪೩॥

ದುರ್ಜನ ಸಜ್ಜನ ಸಹವಾಸ.

ದುಷ್ಟರಸಂಗವಮಾಡಲ್ಕಾಗದು।
ಕಷ್ಟಮಪ್ಪುದದರಿಂಮಿಗೆತಿಳಿವುದು ॥೨೪೪॥
ಜಾಲಿಯಮರದಡಿಸುಳಿದೊಡೆತಿಳಿವುದು।
ಕಾಲಿಗೆಮುಳ್ಳೇಳ್ದರೆನೋವಪ್ಪುದು ॥೨೪೫॥
ಸುಜನರಸಹವಾಸವನುರೆಮಾಳ್ಪುದು
ನಿಜಸೌಖ್ಯಂಬಿಡದದರಿಂದಪ್ಪುದು ॥೨೪೬॥
ಮಲ್ಲಿಗೆವನದೊಳ್ಚರಿಸಲ್ತಿಳಿವುದು।
ನಿಲ್ಲದೆಸದ್ವಾಸನೆಯುದುಬರ್ಪುದು ॥೨೪೭॥

ಮನುಷ್ಯಪ್ರಯತ್ನ.

ಸರ್ವಕಾರ್ಯಕುಂಮನುಜರ್ಜಗದೊಳ್।
ಉರ್ವುತೆಯತ್ನವಗೆಯ್ವುದುನಿಜದೊಳ ॥೨೪೮॥
ದೇವಮಾಡಿಸಿದಂತಾಗಲ್ಕರೆ।
ಭೂವಲಯದೊಳೆಂದೆನಲಾಗದುನೆರೆ ॥೨೪೯॥
ಮೊದಲಯತ್ನಮದುಮನುಜರಧೀನಂ।
ತದುಪರಿಕೃತ್ಯಂದೈವದಧೀನಂ ॥೨೫೦॥
ಬೆಳೆಯುನಿತುವುದದುಮನುಜರಕಾರ್ಯಂ।
ಮಳೆಯನೀವುದದುದೈವದಕಾರ್ಯಂ ॥೨೫೧॥
ಮನುಜಮಾಳ್ಪುದಮೊದಲುರೆಮಾಳ್ಪುದು।
ಕೊನೆಗಾದೈವದಫಲವಂಕಾಯ್ವುದು ॥೨೫೨

ಸ್ವಪ್ರಾಣರಕ್ಷಣೆ.

ಪ್ರಾಣವಸರ್ವರ್ರಕ್ಷಿಸಿಕೊಳ್ವುದು।
ಪ್ರಾಣಚ್ಯುತಿಗೆಡೆಯಂಕುಡಲಾಗದು ॥೨೫೩॥
ಪ್ರಾಣವಿಡಿದುಸತ್ಕೃತಿಗಳಗೆಯ್ವುದು।
ಪ್ರಾಣಿಸಿನೆಲದೊಳ್ಕೀರ್ತಿಯಪಡೆವುದು ॥೨೫೪॥

ಮರಣಭೀತಿ.

ಸಾವಿಗೆಮನುಜಂಭಯಪಡಲಾಗದು।
ಸಾವದುಜೀವರಿಗರಿಯಲ್ತಪ್ಪದು ॥೨೫೫॥
ಜೀವದೊಳಿರ್ಪಾವಸುಖಂತಿಳಿಯಲ್।
ಸಾವಿನೊಳಿಲ್ಲೆಂದೆಂಬುದುಧರೆಯೊಳ್ ॥೨೫೬॥
ಊಟದಸುಖಮದುಸಾವಿನೊಳಿಲ್ಲವೊ।
ನೋಟದಸುಖಮದುಸಾವಿನೊಳಿಲ್ಲವೊ ॥೨೫೭॥
ಆಟದಸುಖಮದುಸಾವಿನೊಳಿಲ್ಲವೊ।
ಕೂಟದಸುಖಮದುಸಾವಿನೊಳಿಲ್ಲವೊ ॥೨೫೮॥
ಕಲಿತವಿದ್ಯಮದುಪೋಪುದೊಸಾವಿಂ।
ಗಳಿಸಿದಧನಮದುಪೋಪುದೊಸಾವಿಂ ॥೨೫೯॥
ಇವನುರೆಮನುಜಂಬಿಟ್ಟಿರಲಾಗದೊ।
ತವೆಸಾವಿಂದೆಲ್ಲಂಮಿಗೆಪೋಪುದೊ ॥೨೬೦॥
ಸುಖಸುಖಮೆಂದೆನಲಿದುಸುಖಮಲ್ಲಂ।
ಸುಖಮಿದುದುಃಖಯುತಂಕೇಳೆಲ್ಲಂ ॥೨೬೧॥
ಆವುದರೊಳ್ರುಚಿಯಜತೆಗೆಕಹಿಯುಂ।
ತೀವಿದಮಿದುವಿನೊಡನೆಕಠಿನತೆಯುಂ ॥೨೬೨॥
ಹಿತವಾಕ್ಯದೊಡನೆಕೇಡಿನನುಡಿಯುಂ।
ಅತಿಶಾಂತಿಯೊಡನೆಕೋಪದಬಿಸಿಯುಂ ॥೨೬೩॥

ರಂಜನೆಯೊಡನೆಮನೋಭಂಜನೆಯುಂ।
ಅಂಜಿಕೆಸರ್ವಶ್ರದ್ಧೆಯುಬಳಿಯುಂ ॥೧೬೪॥
ಬೆರೆದಿರ್ಪುದೊಅಂತಿರ್ಪರವದುಮಿಗೆ।
ಉರೆಸುಖಮೆನಿಪುದೆಕಷ್ಟಮುಯಂತೆಗೆ ॥೧೬೫॥
ಬಯ್ಟಡವಮಾವುದರೊಳ್ತಳವಾಗದು
ಪೊಯ್ದಡವಮಾವುದರೊಳ್ನೋವಾಗದು ॥೧೬೬॥
ಕತ್ತರಿಸಿದೊಡೆರಡುಂಪೋಳಾದುದು।
ಮತ್ತೀತನುವೆಂಬುದುಗೊತ್ತಾಗದು ॥೧೬೭॥
ಕತ್ತಲೆಬೆಳಕೆಂಬುದುಗೋಚರಿಸದು।
ಮತ್ತಾಂನೀನೆಂಬುದುಗೊತ್ತಾಗದು ॥೧೬೮॥
ಸರ್ವಕ್ಕಲಕ್ಷ್ಯಮೆನಿಸಿಳೆಯೊಳಗುರೆ।
ಸರ್ವವಮೀರಿರ್ಪುದಾವುದದುನೆರೆ ॥೧೬೯॥
ಅದೆಸಾವಿನಬಗೆಚೆಂನಿಂತಿಳಿಯಲ್।
ಅದೆದುಃಖಂಬೆರ್ಸದಸುಖಮಿಳೆಯೊಳ್ ॥೧೭೦॥
ಇಂತಪ್ಪರುಮರಣವನೆನೆದೆಲ್ಲರ್।
ಚಿಂತಿಸದಿರ್ಪುದುಮಿಗೆತಿಳಿವುಳ್ಳರ್ ॥೧೭೧॥
ಇಂತೀಸುಬೋಧದೀಪಿಕೆಯಂನೆರೆ।
ಸಂತಸದಿಂಲೋಕದಜನಕರಿದುರೆ ॥೧೭೨॥
ವಿಪರದೆಪೇಳ್ದಂಪರಹಿತಕಾರ್ಯಂ।
ತವೆಜೇರಗೆಯುಬಸವಲಿಂಗಾರ್ಯಂ ॥೧೭೩॥
ಕಂ॥ಶಿವಶಂಕರನೀನಖಿಳ।
ಗರ್ವಿರಳಶಿವಭಕ್ತಿಪದವಮೋಜ್ಞೆವಿಗಳೊ॥
ಳ್ಪ್ರವಿಮಲಕಾರುಣ್ಯಗುಣವ।
ನಿವೆರತನುಮುದಯುನೆಕೊಟ್ಟುರಕ್ಷಿಸುಜಗವಂ ॥೧೭೪॥

ಸಂಪೂರ್ಣಂ.

S.R.DESAPANDE BSc
MALMADDI DHARWAR
S.R.DESAPANDE BSc
MALMADDI DHARWAR
S.R.DESAPANDE BS
MALMADDI DH
S.R.DESAPANDE
MALMADDI DH